# ವಿಶೇಷ ಸಂರಕ್ಷಣಾ ತಂಡ ಅಧಿನಿಯಮ, 1988

## (1988ರ 34)

[09-05-2003ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 24ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 11 ರಿಂದ 14ರವರೆಗಿನ ಪುಟಗಳಲ್ಲಿ ಪ್ರಕಟಿತ]

### ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸದಸ್ಯರು ಈ ಅಧಿನಿಯಮಕ್ಕೆ ಒಳಪಟ್ಟಿರುವುದು
4. ತಂಡದ ರಚನೆ
5. ನಿಯಂತ್ರಣ, ನಿರ್ದೇಶನ ಇತ್ಯಾದಿ
6. ಭಾರತದ ಒಳಗೆ ಮತ್ತು ಹೊರಗೆ ಸೇವಾ ಹೊಣೆಗಾರಿಕೆ
7. ತಂಡದ ಸದಸ್ಯರು ಯಾವಾಗಲೂ ಸಕ್ರಿಯ ಕರ್ತವ್ಯದಲ್ಲಿರುವುದು
8. ಹುದ್ದೆಗೆ ರಾಜೀನಾಮೆ ಮತ್ತು ಹುದ್ದೆಯಿಂದ ಹಿಂದೆ ಸರಿಯುವುದು
9. ಸೇವಾವಧಿ
10. ಸಂಘ ರಚನೆಯ ಹಕ್ಕು, ವಾಕ್ ಸ್ವಾತಂತ್ರ್ಯ ಇತ್ಯಾದಿಗಳ ಸಂಬಂಧದಲ್ಲಿ ನಿರ್ಬಂಧಗಳು
11. ಸೇವೆಯ ಮುಕ್ತಾಯ
12. ಅಪೀಲು
13. ತಂಡದ ಸದಸ್ಯರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು ಮತ್ತು ಕರ್ತವ್ಯಗಳು
14. ತಂಡಕ್ಕೆ ನೆರವು
15. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಸಂರಕ್ಷಣೆ
16. ನಿಯಮ ರಚನಾಧಿಕಾರ
17. ಆದೇಶಗಳನ್ನು ಮತ್ತು ನಿಯಮಗಳನ್ನು ಮಂಡಿಸುವುದು
18. ಅಸ್ತಿತ್ವದಲ್ಲಿರುವ ವಿಶೇಷ ಸಂರಕ್ಷಣಾ ತಂಡದ ಬಗ್ಗೆ ಉಪಬಂಧ.

# ವಿಶೇಷ ಸಂರಕ್ಷಣಾ ತಂಡ ಅಧಿನಿಯಮ, 1988

**(1988ರ 34)**

[ಜೂನ್ 2, 1988]

ಭಾರತದ ಪ್ರಧಾನ ಮಂತ್ರಿಗೆ ಮತ್ತು ಅವನ ನಿಕಟ ಕುಟುಂಬದ ಸದಸ್ಯರಿಗೆ ಅಥವಾ ಮಾಜಿ ಪ್ರಧಾನ ಮಂತ್ರಿಗಳಿಗೆ ಹಾಗೂ ಅವರ ನಿಕಟ ಕುಟುಂಬದ ಸದಸ್ಯರಿಗೆ ಸಾಮೀಪ್ಯದ ಭದ್ರತೆಯನ್ನು ಒದಗಿಸುವುದಕ್ಕಾಗಿ ಒಕ್ಕೂಟದ ಸಶಸ್ತ್ರ ಪಡೆಯ ರಚನೆ ಮತ್ತು ವಿನಿಯಮನ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು :-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ವಿಶೇಷ ಸಂರಕ್ಷಣಾ ತಂಡ ಅಧಿನಿಯಮ, 1988 ಎಂದು ಕರೆಯತಕ್ಕುದು.

(2) ಇದು ಕೇಂದ್ರ ಸರ್ಕಾರವು ರಾಜ ಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು, -

(ಎ) ತಂಡದ ಒಬ್ಬ ಸದಸ್ಯನ ಸಂಬಂಧದಲ್ಲಿ "ಸಕ್ರಿಯ ಕರ್ತವ್ಯ" ಎಂದರೆ ಭಾರತದ ಪ್ರಧಾನ ಮಂತ್ರಿ ಮತ್ತು ಅವನ ನಿಕಟ ಕುಟುಂಬದ ಸದಸ್ಯರು ಅಥವಾ ಮಾಜಿ ಪ್ರಧಾನಮಂತ್ರಿ ಹಾಗೂ ಅವನ ನಿಕಟ ಕುಟುಂಬದ ಸದಸ್ಯರು ಎಲ್ಲಿಯೇ ಇರಲಿ ಅವನನ್ನು ಮತ್ತು ಅವರನ್ನು ದೈಹಿಕವಾಗಿ ರಕ್ಷಿಸಲು ಯಾವ ಅವಧಿಯೊಳಗೆ ತನ್ನನ್ನು ನಿಯುಕ್ತಿಗೊಳಿಸಲಾಗುತ್ತದೆಯೋ ಆ ಅವಧಿಯೊಳಗೆ ಅಂಥ ಸದಸ್ಯನಾಗಿ ಮಾಡುವ ಯಾವುದೇ ಕರ್ತವ್ಯ ;

(ಬಿ) "ನಿರ್ದೇಶಕ" ಎಂದರೆ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕ ಮಾಡಲಾದ ತಂಡದ ನಿರ್ದೇಶಕ;

(ಸಿ) "ತಂಡ " ಎಂದರೆ 4ನೇ ಪ್ರಕರಣದ ಮೇರೆಗೆ ರಚಿಸಿದ ವಿಶೇಷ ಸಂರಕ್ಷಣಾ ತಂಡ ;

(ಡಿ) "ತಂಡದ ಸದಸ್ಯ " ಎಂದರೆ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ನಿಯಮಿಸಿದ ಪ್ರಾಧಿಕಾರವು ಆ ತಂಡಕ್ಕೆ ನೇಮಕ ಮಾಡಿರುವ ಒಬ್ಬ ವ್ಯಕ್ತಿ ;

(ಇ) "ನಿಕಟ ಕುಟುಂಬದ ಸದಸ್ಯರು" ಎಂದರೆ ಹೆಂಡತಿ, ಗಂಡ, ಮಕ್ಕಳು ಮತ್ತು ತಂದೆ ತಾಯಿಗಳು ;

(ಎಫ್) "ನಿಯಮಿಸಲಾದುದು " ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ಸಾಮೀಪ್ಯದ ಭದ್ರತೆ" ಎಂದರೆ ರಸ್ತೆ, ರೈಲು, ವಾಯುಯಾನ, ಜಲಯಾನ ಅಥವಾ ಕಾಲ್ನಡಿಗೆ ಅಥವಾ ಸಾರಿಗೆಯ ಯಾವುದೇ ಇತರ ಸಾಧನದ ಮೂಲಕ ಪ್ರಯಾಣ ಮಾಡುವ ಕಾಲದಲ್ಲಿ ಅತಿ ಹತ್ತಿರದಿಂದ ಒದಗಿಸಲಾಗುವ ಸಂರಕ್ಷಣೆ, ಮತ್ತು ಅದು ಸಮಾರಂಭಗಳ, ನಿಗದಿತ ಕಾರ್ಯಕ್ರಮಗಳ, ನಿವಾಸದ ಅಥವಾ ತಂಗುವ ಸ್ಥಳಗಳನ್ನು ಒಳಗೊಳ್ಳತಕ್ಕುದು ಮತ್ತು ಆ ವ್ಯಕ್ತಿಯ ಅಥವಾ ಅವನ ನಿಕಟ ಕುಟುಂಬದ ಸದಸ್ಯರ ಸುತ್ತಮುತ್ತಲಿನ ವರ್ತುಲಾಕೃತಿ ತಂಡಗಳು, ಪ್ರತ್ಯೇಕ ರಕ್ಷಣಾವರಣಗಳು, ಸ್ಟೆರೈಲ್ ವಲಯ ಮತ್ತು ಅವನಿಗೆ ಅಥವಾ ಆ ಸದಸ್ಯರಿಗೆ ಸಂಬಂಧಿಸಿದಂತೆ ಭಾಷಣ ವೇದಿಕೆ ಮತ್ತು ಪ್ರವೇಶ ನಿಯಂತ್ರಣ- ಇವುಗಳು ಅದರಲ್ಲಿ ಸೇರಿರತಕ್ಕುದು.

(ಹೆಚ್) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಆದರೆ ಭಾರತ ದಂಡ ಸಂಹಿತೆ (1860ರ 45)ರಲ್ಲಿ ಪರಿಭಾಷಿಸಿರುವ ಎಲ್ಲ ಪದಗಳು ಮತ್ತು ಪದಾವಳಿಗಳು ಆ ಸಂಹಿತೆಯಲ್ಲಿ ಅವುಗಳಿಗೆ ಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು.

**3. ಸದಸ್ಯರು ಈ ಅಧಿನಿಯಮಕ್ಕೆ ಒಳಪಟ್ಟಿರುವುದು.-** ತಂಡದ ಪ್ರತಿಯೊಬ್ಬ ಸದಸ್ಯನು, ಅವನು ಎಲ್ಲಿಯೇ ಇರಲಿ ಈ ಅಧಿನಿಯಮಕ್ಕೊಳಪಟ್ಟಿರತಕ್ಕುದು.

**4. ತಂಡದ ರಚನೆ.-** (1) ವಿಶೇಷ ಸಂರಕ್ಷಣಾ ತಂಡ ಎಂದು ಕರೆಯುವ ಒಕ್ಕೂಟದ ಒಂದು ಸಶಸ್ತ್ರ ಪಡೆಯು,-

(i) ಪ್ರಧಾನ ಮಂತ್ರಿಗೆ ಮತ್ತು ಅವನ ನಿಕಟ ಕುಟುಂಬದವರಿಗೆ; ಮತ್ತು

(ii) ಯಾರೇ ಮಾಜಿ ಪ್ರಧಾನಮಂತ್ರಿಗೆ ಅಥವಾ ಅವನ ನಿಕಟ ಕುಟುಂಬದವರಿಗೆ-

(ಎ) ಪ್ರಧಾನ ಮಂತ್ರಿಯ ಪದಧಾರಣ ಮಾಡಿರುವುದು ನಿಂತುಹೋದ ದಿನಾಂಕದಿಂದ ಯಾರೇ ಮಾಜಿ ಪ್ರಧಾನಮಂತ್ರಿಗೆ ಹತ್ತು ವರ್ಷಗಳ ಅವಧಿಗೆ; ಮತ್ತು

(ಬಿ) ಮಾಜಿ ಪ್ರಧಾನಮಂತ್ರಿಯು ಅಥವಾ ಅವನ ನಿಕಟ ಕುಟುಂಬದ ಯಾರೇ ಸದಸ್ಯನು ಎದುರಿಸುತ್ತಿರುವ ಬೆದರಿಕೆಯ ಮಟ್ಟವು, ಅಂಥ ಮಾಜಿ ಪ್ರಧಾನ ಮಂತ್ರಿಗೆ ಅಥವಾ ಸಂದರ್ಭಾನುಸಾರ ಅವನ ನಿಕಟ ಕುಟುಂಬದ ಸದಸ್ಯನಿಗೆ ಸಾಮೀಪ್ಯ ಭದ್ರತೆಯನ್ನು ಒದಗಿಸಲೇಬೇಕಾಗುತ್ತದೆನ್ನುವುದನ್ನು ಸಮರ್ಥಿಸುವ ಸ್ವರೂಪದ ಬೆದರಿಕೆಯ ಮಟ್ಟದ್ದಾಗಿದ್ದರೆ, (ಎ) ಉಪಖಂಡದಲ್ಲಿ ಉಲ್ಲೇಖಿಸಿದ ಹತ್ತು ವರ್ಷಗಳ ಅವಧಿಯನ್ನು ಮೀರುವ ಯಾವುದೇ ಅವಧಿಯವರೆಗೆ -

- ಸಾಮೀಪ್ಯ ಭದ್ರತೆಯನ್ನು ಒದಗಿಸುವುದಕ್ಕಾಗಿ ಇರತಕ್ಕದ್ದು:

ಪರಂತು, ಬೆದರಿಕೆಯ ಮಟ್ಟವನ್ನು ನಿರ್ಧರಣೆ ಮಾಡುವಾಗ, ಕೇಂದ್ರ ಸರ್ಕಾರವು, ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು, ಎಂದರೆ:-

(ಎ) ಆ ಬೆದರಿಕೆಯು ಯಾವುದೇ ಉಗ್ರಗಾಮಿ ಅಥವಾ ಭಯೋತ್ಪಾದಕ ಸಂಘಟನೆಗಳಿಂದ ಉಂಟಾಗಿದೆ; ಮತ್ತು

(ಬಿ) ಆ ಬೆದರಿಕೆಯು ತೀವ್ರ ಮತ್ತು ಮುಂದುವರೆಯುತ್ತಿರುವ ಸ್ವರೂಪದ್ದು:

ಮತ್ತೂ ಪರಂತು, ಕೇಂದ್ರ ಸರ್ಕಾರವು ಬೆದರಿಕೆಯ ಮಟ್ಟವನ್ನು, ಎರಡು ಅನುಕ್ರಮ ನಿರ್ಧರಣೆಗಳ ನಡುವೆ ಹನ್ನೆರಡು ತಿಂಗಳಿಗಿಂತ ಹೆಚ್ಚು ಕಾಲ ಗತಿಸದಂಥ ರೀತಿಯಲ್ಲಿ ನಿಯತಕಾಲಿಕವಾಗಿ ನಿರ್ಧರಣೆ ಮಾಡತಕ್ಕದ್ದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ,-

(ಎ) ಯಾರೇ ಮಾಜಿ ಪ್ರಧಾನಮಂತ್ರಿಯು ಅಥವಾ ಪ್ರಧಾನ ಮಂತ್ರಿಯ ಅಥವಾ ಮಾಜಿ ಪ್ರಧಾನ ಮಂತ್ರಿಯ ನಿಕಟ ಕುಟುಂಬದ ಯಾರೇ ಆಗಲಿ ಸಾಮೀಪ್ಯದ ಭದ್ರತೆಯನ್ನು ನಿರಾಕರಿಸಬಹುದು;

(ಬಿ) ವಿಶೇಷ ಸಂರಕ್ಷಣಾ ತಂಡ (ತಿದ್ದುಪಡಿ) ಅಧಿನಿಯಮ, 1999ರ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ತರುವಾಯವೇ ಆಗಲಿ ಸಾಮೀಪ್ಯ ಭದ್ರತೆಯನ್ನು ಮಾಜಿ ಪ್ರಧಾನಮಂತ್ರಿಯಿಂದ ಹಿಂತೆಗೆದುಕೊಂಡಿದ್ದರೆ, ಅಂಥ ಸಾಮೀಪ್ಯ ಭದ್ರತೆಯನ್ನು ಮಾಜಿ ಪ್ರಧಾನ ಮಂತ್ರಿಯ ನಿಕಟ ಕುಟುಂಬದವರಿಂದ ಸಹ ಹಿಂತೆಗೆದುಕೊಳ್ಳತಕ್ಕದ್ದು:

ಪರಂತು, ಮಾಜಿ ಪ್ರಧಾನ ಮಂತ್ರಿಯ ನಿಕಟ ಕುಟುಂಬದ ಯಾರೇ ಸದಸ್ಯನು ಎದುರಿಸುತ್ತಿರುವ ಬೆದರಿಕೆಯ ಮಟ್ಟವು, ಸಾಮಿ೦ಾಪ್ಯ ಭದ್ರತೆಯನ್ನು ಅಥವಾ ಯಾವುದೇ ಇತರ ಭದ್ರತೆಯನ್ನು ಸಮರ್ಥಿಸಿದರೆ, ಅಂಥ ಭದ್ರತೆಯನ್ನು ಆ ವ್ಯಕ್ತಿಗೆ ಒದಗಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ನಿಯಮಿಸಬಹುದಾದಂಥ ರೀತಿಯಲ್ಲಿ ತಂಡವನ್ನು ರಚಿಸತಕ್ಕುದು ಮತ್ತು ತಂಡದ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು.

(3) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಒಕ್ಕೂಟದ ಯಾವುದೇ ಇತರ ಸಶಸ್ತ್ರ ಪಡೆಯ ಯಾರೇ ವ್ಯಕ್ತಿಯನ್ನು ಅಥವಾ ಯಾರೇ ಸದಸ್ಯನನ್ನು ಕೇಂದ್ರ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ನೇಮಕ ಮಾಡಬಹುದು ಮತ್ತು ಹಾಗೆ ನೇಮಕ ಮಾಡಲಾದ ವ್ಯಕ್ತಿಯನ್ನು, ಅವನ ನೇಮಕಾತಿ ಅವಧಿಯಲ್ಲಿ ತಂಡದ ಒಬ್ಬ ಸದಸ್ಯನೆಂದು ಭಾವಿಸತಕ್ಕುದು, ಮತ್ತು ಈ ಅಧಿನಿಯಮದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅಂಥ ವ್ಯಕ್ತಿ ಅಥವಾ ಸದಸ್ಯನಿಗೆ ಅನ್ವಯವಾಗತಕ್ಕುದು.

**5. ನಿಯಂತ್ರಣ, ನಿರ್ದೇಶನ ಇತ್ಯಾದಿ.**- ತಂಡದ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕುದು, ಮತ್ತು ಅದನ್ನು ಆ ಸರ್ಕಾರವು ಚಲಾಯಿಸತಕ್ಕುದು ಮತ್ತು ಅದಕ್ಕೆ ಮತ್ತು ಈ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೊಳಪಟ್ಟು, ತಂಡದ ಸಮಾದೇಶ ಮತ್ತು ಮೇಲ್ವಿಚಾರಣೆಯು ತಂಡದ ನಿರ್ದೇಶಕನೆಂದು ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಅಧಿಕಾರಿಯಲ್ಲಿ ನಿಹಿತವಾಗತಕ್ಕುದು.

(2) ನಿರ್ದೇಶಕನು, ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಷ್ಟು ಸಂಖ್ಯೆಯ ಉಪ-ನಿರ್ದೇಶಕರು, ಸಹಾಯಕ ನಿರ್ದೇಶಕರು, ಜಂಟಿ ಸಹಾಯಕ ನಿರ್ದೇಶಕರು ಮತ್ತು ಇತರ ಅಧಿಕಾರಿಗಳು ಅವನಿಗೆ ನೆರವಾಗತಕ್ಕುದು.

**6. ಭಾರತದ ಒಳಗೆ ಮತ್ತು ಹೊರಗೆ ಸೇವಾ ಹೊಣೆಗಾರಿಕೆ.**- ತಂಡದ ಪ್ರತಿಯೊಬ್ಬ ಸದಸ್ಯನು ಭಾರತದ ಯಾವುದೇ ಭಾಗದಲ್ಲಿ ಹಾಗೂ ಭಾರತದ ಹೊರಗೂ ಸಹ ಸೇವೆ ಸಲ್ಲಿಸಲು ಬದ್ಧನಾಗಿರತಕ್ಕುದು.

**7. ತಂಡದ ಸದಸ್ಯರು ಯಾವಾಗಲೂ ಸಕ್ರಿಯ ಕರ್ತವ್ಯದಲ್ಲಿರುವುದು.**- ರಜೆಯ ಮೇಲಿಲ್ಲದ ಅಥವಾ ಅಮಾನತ್ತಿನಲ್ಲಿರದ ತಂಡದ ಪ್ರತಿಯೊಬ್ಬ ಸದಸ್ಯನು, ಈ ಅಧಿನಿಯಮದ ಎಲ್ಲ ಉದ್ದೇಶಗಳಿಗಾಗಿ ಯಾವಾಗಲೂ ಸಕ್ರಿಯ ಕರ್ತವ್ಯದಲ್ಲಿರತಕ್ಕುದು; ಮತ್ತು ಈ ಅಧಿನಿಯಮದ

ಮೇರೆಗೆ ತಂಡದ ಕರ್ತವ್ಯಗಳು ಮತ್ತು ಜವಾಬ್ದಾರಿಗಳಿಗೆ ಸಂಗತವಾಗಿರುವಂಥ ಯಾವುದೇ ರೀತಿಯಲ್ಲಿ ಅವನನ್ನು ಯಾವುದೇ ಕಾಲದಲ್ಲಿ ನಿಯೋಜಿಸಬಹುದು ಅಥವಾ ಅಭಿನಿಯೋಜಿಸಬಹುದು.

**8. ಹುದ್ದೆಗೆ ರಾಜೀನಾಮೆ ಮತ್ತು ಹುದ್ದೆಯಿಂದ ಹಿಂದೆ ಸರಿಯುವುದು.**– ನಿಯಮಿಸಿದ ಪ್ರಾಧಿಕಾರದ ಲಿಖಿತ ಪೂರ್ವಾನುಮತಿ ಪಡೆದ ಹೊರತು, ತಂಡದ ಯಾವನೇ ಸದಸ್ಯನು –

(ಎ) ತನ್ನ ವಚನಬಂಧದ ಅವಧಿಯಲ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಲು ; ಅಥವಾ

(ಬಿ) ತನ್ನ ಹುದ್ದೆಯ ಎಲ್ಲ ಕರ್ತವ್ಯಗಳಿಂದ ಅಥವಾ ಯಾವುದೇ ಕರ್ತವ್ಯಗಳಿಂದ ಹಿಂತೆಗೆಯಲು

– ಸ್ವತಂತ್ರನಾಗಿರತಕ್ಕುದಲ್ಲ.

**9. ಸೇವಾವಧಿ.**– ತಂಡದ ಪ್ರತಿಯೊಬ್ಬ ಸದಸ್ಯನು ರಾಷ್ಟ್ರಪತಿಯ ಇಷ್ಟಪರ್ಯಂತ ಪದಧಾರಣಮಾಡಿರತಕ್ಕುದು.

**10. ಸಂಘ ರಚನೆಯ ಹಕ್ಕು, ವಾಕ್ ಸ್ವಾತಂತ್ರ್ಯ,ಇತ್ಯಾದಿಗಳ ಸಂಬಂಧದಲ್ಲಿ ನಿರ್ಬಂಧಗಳು.**– (1) ಕೇಂದ್ರ ಸರ್ಕಾರದ ಅಥವಾ ನಿಯಮಿಸಿದ ಪ್ರಾಧಿಕಾರದ ಲಿಖಿತ ಪೂರ್ವ ಮಂಜೂರಾತಿ ಇಲ್ಲದೆ ತಂಡದ ಯಾವನೇ ಸದಸ್ಯನು,–

(ಎ) ಯಾವುದೇ ವೃತ್ತಿ ಸಂಘ, ಕಾರ್ಮಿಕ ಸಂಘ, ರಾಜಕೀಯ ಸಂಘದ ಸದಸ್ಯನಾಗತಕ್ಕುದಲ್ಲ ಅಥವಾ ಅವುಗಳೊಂದಿಗೆ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳತಕ್ಕುದಲ್ಲ ಅಥವಾ ವೃತ್ತಿ ಸಂಘಗಳ, ಕಾರ್ಮಿಕ ಸಂಘಗಳ, ಅಥವಾ ರಾಜಕೀಯ ಸಂಘಗಳ ಯಾವುದೇ ವರ್ಗದೊಂದಿಗೆ ಸಂಬಂಧ ಇಟ್ಟುಕೊಳ್ಳತಕ್ಕುದಲ್ಲ ; ಅಥವಾ

(ಬಿ) ಕೇವಲ ಸಾಮಾಜಿಕ, ಮನರಂಜನಾತ್ಮಕ ಅಥವಾ ಧಾರ್ಮಿಕ ಸ್ವರೂಪದ್ದಲ್ಲದ ಯಾವುದೇ ಸೊಸೈಟಿ, ಸಂಸ್ಥೆ, ಸಂಘ ಅಥವಾ ಸಂಘಟನೆಯ ಸದಸ್ಯನಾಗತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದರೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳತಕ್ಕುದ್ದಲ್ಲ; ಅಥವಾ

(ಸಿ) ಪತ್ರ ವ್ಯವಹಾರವು ಅಥವಾ ಪ್ರಕಟಣೆಯು ಅವನ ಕರ್ತವ್ಯಗಳ ಪ್ರಾಮಾಣಿಕ ನಿರ್ವಹಣೆಯಲ್ಲಿರುವ ಹೊರತು, ಅಥವಾ ಅದು ಕೇವಲ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿರುವ ಅಥವಾ ನಿಯಮಿಸಿದ ಸ್ವರೂಪದ್ದಾಗಿರುವ ಹೊರತು, ಪತ್ರಿಕೆಯೊಂದಿಗೆ ಪತ್ರ ವ್ಯವಹಾರ ಮಾಡತಕ್ಕುದಲ್ಲ ಅಥವಾ ಯಾವುದೇ ಪುಸ್ತಕ, ಪತ್ರ ಅಥವಾ ಇತರ ದಸ್ತಾವೇಜುಗಳನ್ನು ಪ್ರಕಟಿಸತಕ್ಕುದಲ್ಲ ಅಥವಾ ಪ್ರಕಟಿಸುವಂತೆ ಮಾಡತಕ್ಕುದಲ್ಲ.

**ವಿವರಣೆ:**– ಯಾವುದೇ ಸೊಸೈಟಿ, ಸಂಸ್ಥೆ, ಸಂಘ ಅಥವಾ ಸಂಘಟನೆಯು (ಬಿ) ಖಂಡದ ಮೇರೆಗೆ ಕೇವಲ ಸಾಮಾಜಿಕ, ಮನರಂಜನಾತ್ಮಕ ಅಥವಾ ಧಾರ್ಮಿಕ ಸ್ವರೂಪದ್ದಾಗಿದೆಯೇ ಹೇಗೆ ಅಥವಾ ಯಾವುದೇ ಪುಸ್ತಕ, ಪತ್ರ ಅಥವಾ ದಸ್ತಾವೇಜು (ಸಿ) ಖಂಡದ ಮೇರೆಗೆ ಅವನ ಕರ್ತವ್ಯಗಳ ಪ್ರಾಮಾಣಿಕ ನಿರ್ವಹಣೆಯಲ್ಲಿರುವಂಥ ಪತ್ರ ವ್ಯವಹಾರವೇ ಅಥವಾ ಪ್ರಕಟಣೆಯೇ ಹೇಗೆ ಅಥವಾ ಕೇವಲ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದು ಅಥವಾ ನಿಯಮಿಸಿದ ಸ್ವರೂಪದ್ದಾಗಿದೆಯೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅದರ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕುದು.

(2) ತಂಡದ ಯಾವನೇ ಸದಸ್ಯನು, ಯಾವುವೇ ರಾಜಕೀಯ ಉದ್ದೇಶಗಳಿಗಾಗಿ ಅಥವಾ ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ವ್ಯಕ್ತಿಗಳ ಯಾವುದೇ ನಿಕಾಯವು ಏರ್ಪಡಿಸಿದ ಯಾವುದೇ ಸಭೆಯಲ್ಲಿ ಭಾಗವಹಿಸತಕ್ಕುದಲ್ಲ ಅಥವಾ ಸಭೆಯಲ್ಲಿ ಭಾಷಣ ಮಾಡತಕ್ಕುದಲ್ಲ ಅಥವಾ ಅಂಥ ಯಾವುದೇ ಪ್ರದರ್ಶನದಲ್ಲಿ ಪಾಲ್ಗೊಳ್ಳತಕ್ಕುದಲ್ಲ.

**11. ಸೇವೆಯ ಮುಕ್ತಾಯ.**- ನಿಯಮಿಸಿದ ಪ್ರಾಧಿಕಾರವು, ಆದೇಶದ ಮೂಲಕ ಸಾರ್ವಜನಿಕ ಹಿತದೃಷ್ಟಿಯಿಂದ ತಂಡದ ಯಾವನೇ ಸದಸ್ಯನ ನೇಮಕಾತಿಯನ್ನು ಮುಕ್ತಾಯಗೊಳಿಸಬಹುದು ಮತ್ತು ಅಂಥ ಮುಕ್ತಾಯವನ್ನು ನಿರುಪಾಧಿಕ ಬಿಡುಗಡೆ ಎಂದು ಭಾವಿಸತಕ್ಕುದು ಮತ್ತು ಅದು ವಜಾ ಅಥವಾ ತೆಗೆದುಹಾಕುವಿಕೆ ಆಗತಕ್ಕುದಲ್ಲ.

**12. ಅಪೀಲು.**- (1) 11ನೇ ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ತಂಡದ ಯಾವನೇ ಸದಸ್ಯನು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ, ಕೇಂದ್ರ ಸರ್ಕಾರವು ರಚಿಸತಕ್ಕ ಮಂಡಲಿಗೆ ಅಪೀಲನ್ನು ಸಲ್ಲಿಸಬಹುದು.

(2) ಮಂಡಲಿಯು ನಿಯಮಿಸಬಹುದಾದಂಥ ವ್ಯಕ್ತಿಗಳನ್ನು ಒಳಗೊಂಡಿರತಕ್ಕುದು.

(3) ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಪ್ರಶ್ನಿಸತಕ್ಕುದಲ್ಲ.

(4) ಮಂಡಲಿಯು ತನ್ನದೇ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕುದು.

**13. ತಂಡದ ಸದಸ್ಯರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು ಮತ್ತು ಕರ್ತವ್ಯಗಳು.**- ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸುವ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು, ತಂಡದ ಯಾವನೇ ಸದಸ್ಯನು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಬಹುದು ಅಥವಾ ಅಂಥ ಕರ್ತವ್ಯಗಳನ್ನು ನಿರ್ವಹಿಸಬಹುದೆಂದು ನಿರ್ದೇಶಿಸಬಹುದು.

**14. ತಂಡಕ್ಕೆ ನೆರವು.**- ತಂಡದ ನಿರ್ದೇಶಕನಿಗೆ ಅಥವಾ ಯಾವನೇ ಸದಸ್ಯನಿಗೆ ವಹಿಸಿದ ಕರ್ತವ್ಯಗಳ ಮತ್ತು ಜವಾಬ್ದಾರಿಗಳ ನಿರ್ವಹಣೆಯಲ್ಲಿ ಅಂಥ ನಿರ್ದೇಶಕನಿಗೆ ಅಥವಾ ಸದಸ್ಯನಿಗೆ ನೆರವಾಗುವಂತೆ ಕೋರಿದಾಗ ಹಾಗೆ ನೆರವು ನೀಡುವುದು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರ ಆಡಳಿತದ ಪ್ರತಿಯೊಂದು ಮಂತ್ರಾಲಯ ಮತ್ತು ಇಲಾಖೆ, ಪ್ರತಿಯೊಂದು ಭಾರತೀಯ ದೂತಾವಾಸ, ಪ್ರತಿಯೊಂದು ಸ್ಥಳೀಯ ಅಥವಾ ಇತರ ಪ್ರಾಧಿಕಾರ ಅಥವಾ ಪ್ರತಿಯೊಂದು ಸಿವಿಲ್ ಅಥವಾ ಸೈನಿಕ ಪ್ರಾಧಿಕಾರದ ಕರ್ತವ್ಯವಾಗಿರತಕ್ಕುದು.

**15. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಸಂರಕ್ಷಣೆ.**- ಈ ಅಧಿನಿಯಮ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ರಚಿಸಿದ ಯಾವುದೇ ನಿಯಮದ ಮೇರೆಗೆ ಯಾವ ತಂಡಕ್ಕೆ ಅಥವಾ ಅದರ ಯಾವ ಸದಸ್ಯನಿಗೆ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆಯೋ ಅಥವಾ ಕರ್ತವ್ಯಗಳನ್ನು ವಿಧಿಸಲಾಗಿದೆಯೋ ಆ ತಂಡದ ಅಥವಾ ಅದರ ಯಾವನೇ ಸದಸ್ಯನ ವಿರುದ್ಧ ಈ ಅಧಿನಿಯಮ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ರಚಿಸಿದ ಯಾವುದೇ ನಿಯಮ ಅಥವಾ ಯಾವುದೇ ಅಂಥ ನಿಯಮದ ಮೇರೆಗೆ ಹೊರಡಿಸಿದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ

ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಥವಾ ಮಾಡದೆ ಬಿಟ್ಟಿರುವ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**16. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು, ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ :–

(ಎ) 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ತಂಡವನ್ನು ರಚಿಸತಕ್ಕ ರೀತಿ ಮತ್ತು ಅದರ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಬಿ) 8ನೇ ಪ್ರಕರಣದ, 10ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು 11ನೇ ಪ್ರಕರಣದ ಮೇರೆಗೆ ನಿಯಮಿಸಬಹುದಾದಂಥ ಪ್ರಾಧಿಕಾರಗಳು ;

(ಸಿ) 10ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗಿನ ಪತ್ರವ್ಯವಹಾರದ ಅಥವಾ ಪ್ರಕಟಣೆಯ ಸ್ವರೂಪ;

(ಡಿ) ಈ ಅಧಿನಿಯಮಕ್ಕೆ ಒಳಪಟ್ಟಿರುವ ವ್ಯಕ್ತಿಯು, ರಾಜಕೀಯ ಉದ್ದೇಶಗಳಲ್ಲದ ಇತರ ಯಾವ ಉದ್ದೇಶಗಳಿಗಾಗಿ 10ನೇ ಪ್ರಕರಣದ(2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಸಭೆಯಲ್ಲಿ ಭಾಗವಹಿಸತಕ್ಕುದಲ್ಲವೋ ಅಥವಾ ಸಭೆಯಲ್ಲಿ ಭಾಷಣ ಮಾಡತಕ್ಕುದಲ್ಲವೋ ಅಥವಾ ಯಾವುದೇ ಪ್ರದರ್ಶನದಲ್ಲಿ ಪಾಲ್ಗೊಳ್ಳತಕ್ಕುದಲ್ಲವೋ ಆ ಉದ್ದೇಶಗಳು ;

(ಇ) 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರಾಗತಕ್ಕ ವ್ಯಕ್ತಿಗಳು ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**17. ಆದೇಶಗಳನ್ನು ಮತ್ತು ನಿಯಮಗಳನ್ನು ಮಂಡಿಸುವುದು.–** 13ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಮತ್ತು 16ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅವುಗಳನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇರಿಸತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಆದೇಶದಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಆದೇಶ ಅಥವಾ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಆದೇಶ ಅಥವಾ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಆದೇಶದ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕುದಲ್ಲ.

**18. ಅಸ್ತಿತ್ವದಲ್ಲಿರುವ ವಿಶೇಷ ಸಂರಕ್ಷಣಾ ತಂಡದ ಬಗ್ಗೆ ಉಪಬಂಧ.-** (1) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ವಿಶೇಷ ಸಂರಕ್ಷಣಾ ತಂಡವನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ತಂಡವೆಂದು ಭಾವಿಸತಕ್ಕುದು.

(2) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ವಿಶೇಷ ಸಂರಕ್ಷಣಾ ತಂಡದ ಸದಸ್ಯರನ್ನು, ಈ ಅಧಿನಿಯಮದ ಮೇರೆಗೆ ತಂಡದ ಸದಸ್ಯರಾಗಿ ನೇಮಕ ಮಾಡಲಾಗಿದೆಯೆಂಬುದಾಗಿ ಭಾವಿಸತಕ್ಕುದು.

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವಿಶೇಷ ಸಂರಕ್ಷಣಾ ತಂಡದ ರಚನೆಗೆ ಸಂಬಂಧಪಟ್ಟಂತೆ ಮತ್ತು ನೇಮಕಗೊಂಡಿರುವ ಯಾವನೇ ವ್ಯಕ್ತಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, ಈ ಅಧಿನಿಯಮದ ಮೇರೆಗೆ ಅಂಥ ಕಾರ್ಯವನ್ನು ಮಾಡಿದ್ದರೆ ಅಥವಾ ಕ್ರಮವನ್ನು ಕೈಗೊಳ್ಳಲಾಗಿದ್ದರೆ ಹೇಗೋ ಹಾಗೆ ಕಾನೂನಿನ ದೃಷ್ಟಿಯಲ್ಲಿ ಸಿಂಧುವಾಗಿರತಕ್ಕುದು ಮತ್ತು ಪರಿಣಾಮಕಾರಿಯಾಗಿರತಕ್ಕುದು.

*　　*　　*　　*